JETIR.ORG ISSN: 2349-5162 | ESTD Year : 2014 | Monthly Issue
JOURNAL OF EMERGING TECHNOLOGIES AND INNOVATIVE RESEARCH (JETIR)
An International Scholarly Open Access, Peer-reviewed, Refereed Journal

**ಡಾ.ಎಸ್.ಬಿ.ಚನ್ನಗೌಡ್ರ.** ಎಂ.ಎ., ಪಿಹೆಚ್.ಡಿ.

**ಮುಖ್ಯಸ್ಥರು ಕನ್ನಡ ವಿಭಾಗ**

**ಪ್ರಾಂಶುಪಾಲರು ಬಿ.ಆರ್.ತಂಬಾಕದ ಪ್ರಥಮ ದರ್ಜೆ ಕಲಾ ವಾಣಿಜ್ಯ ಹಾಗೂ ವಿಜ್ಞಾನ ಮಹಾವಿದ್ಯಾಲಯ**

**ಹಾಗೂ ಸ್ನಾತಕೋತ್ತರ ಅಧ್ಯಯನ ಕೇಂದ್ರ ಹಿರೇಕೆರೂರು. 581111**

# ವಚನ ಸಾಹಿತ್ಯದ ಸಾರ್ವಕಾಲಿಕ ಮೌಲ್ಯಗಳು

**ವಚನ ಸಾಹಿತ್ಯ :**

ಸಮಗ್ರ ವಚನ ಸಾಹಿತ್ಯ ಕನ್ನಡದ ಸಾಹಿತ್ಯದ ಪ್ರಮುಖ ಪ್ರಕಾರಗಳಲ್ಲಿ ಒಂದು. 11ನೇ ಶತಮಾನದ ಉತ್ತರಾರ್ಧದಲ್ಲಿ ಉದಯಿಸಿ 12ನೇ ಶತಮಾನದ ಕಡೆಯವರೆಗೂ ಬಸವಣ್ಣನವರ–ಜನಸಾಮಾನ್ಯರ ಆಂದೋಲನದ ಭಾಗವಾಗಿ ಬೆಳೆದು ಬಂದದ್ದು ವಚನ ಸಾಹಿತ್ಯ. ಇದು ಸಾಹಿತ್ಯ ಪರಿಭಾಷೆಯ ವಿಶಿಷ್ಟ ಸಾಹಿತ್ಯ ಪ್ರಕಾರದ ಕಾವ್ಯ. ಹಾಡಿದರೆ ಹಾಡಾಗುವ, ಓದಿದರೆ ಗದ್ಯವಾಗುವ ಕನ್ನಡದ ವಿಶೇಷ ಕಾವ್ಯ ಪ್ರಕಾರ. ವಚನ ಸಾಹಿತ್ಯವು ತನ್ನ ಕಾಲದಲ್ಲಿನ ಜನರ ಮನೋಭಿವ್ಯಕ್ತಿಗೆ ಸಂಗಾತಿಯಾಯಿತು. ವಚನ ಎಂದರೆ 'ಪ್ರಮಾಣ', 'ಕೊಟ್ಟ ಮಾತು' ಎಂದರ್ಥ. ಧರ್ಮ ಪ್ರೇರಿತ ಸಾಹಿತ್ಯವಾದ ವಚನ ಸಾಹಿತ್ಯದ ಸ್ವಂತಿಕೆಯಿಂದ ಮೆರೆವ ವಚನಗಳು ಕನ್ನಡ ಸಾಹಿತ್ಯದಲ್ಲಿ ಪ್ರಭಾವಶಾಲಿ ಆತ್ಮವಿಮರ್ಶೆಯ ಮಾಧ್ಯಮವಾಗಿ ಸ್ವತಂತ್ರವಾಗಿ ಬೆಳೆದು ವಿಜ್ರಂಭಿಸಿ ಮೆರೆದಿವೆ.

12ನೇ ಶತಮಾನಕ್ಕೂ ಹಿಂದೆ ಕರ್ನಾಟಕದ ಧಾರ್ಮಿಕ ಮತ್ತು ಸಾಮಾಜಿಕ ಜನಜೀವನ ಸಾಕಷ್ಟು ಅನಾಗರಿಕವಾಗಿತ್ತು. ಇಂಥ ವ್ಯವಸ್ಥೆಯನ್ನು ಸುಧಾರಣೆ ಮಾಡಿ ಜನಸಾಮಾನ್ಯರ ಬದುಕನ್ನು ಉನ್ನತಗೊಳಿಸಲು 12ನೇ ಶತಮಾನದ ಶಿವಶರಣರ ಶ್ರಮ ಅನನ್ಯ ಅಪ್ರತಿಮ. ಪುರೋಹಿತಶಾಹಿಯ ಯಜ್ಞ ಯಾಗಾದಿಗಳನ್ನು, ಇತರ ವೈದಿಕ ಆಚರಣೆಗಳನ್ನು, ವಾಮಪಂಥೀಯ ಆಚರಣೆಗಳನ್ನು, ಕೆಳವರ್ಗದವರ ಪ್ರಾಣಿಬಲಿ ಮುಂತಾದ ಕ್ಷುದ್ರ ಆಚರಣೆಗಳನ್ನು, ವರ್ಣವ್ಯವಸ್ಥೆ ಜಾತಿಪದ್ಧತಿ, ಅಸ್ಪೃಶ್ಯತೆ, ಮೌಢ್ಯ, ಅಜ್ಞಾನ ಮತ್ತು ಕಂದಾಚಾರಗಳನ್ನೆಲ್ಲ ಶಿವಶರಣರು ಖಂಡಿಸಿ ಪ್ರತಿಭಟಿಸಿದರು. ವರ್ಣ–ಆಧಾರಿತ, ಜಾತಿ–ಆಧಾರಿತ, ಲಿಂಗ–ಆಧಾರಿತ ಅಸಮಾನತೆಯನ್ನು ನಿರ್ಮೂಲನೆಗೊಳಿಸಿ ಸಮಾನತೆಯ ಸಮಾಜ ನಿರ್ಮಾಣಕ್ಕೆ ಪ್ರಯತ್ನಿಸಿದರು. ತಮ್ಮ ಉದ್ದೇಶ ಸಾಧನೆಗಾಗಿ ಜೀವನವನ್ನು ಮುಡಿಪಾಗಿಟ್ಟು ಜಡ್ಡುಗಟ್ಟಿದ ಸಮಾಜಕ್ಕೆ ಹೊಸರೂಪ ನೀಡಿದ ಕೀರ್ತಿಗೆ ಅಂದಿನ ಶಿವಶರಣರು ಪಾತ್ರರಾಗಿದ್ದಾರೆ. ಕರ್ನಾಟಕದ ಸಾಮಾಜಿಕ, ಧಾರ್ಮಿಕ ಶೈಕ್ಷಣಿಕ, ಸಾಂಸ್ಕೃತಿಕ ಹಾಗೂ ಸಾಹಿತ್ಯ ಕ್ಷೇತ್ರಗಳಲ್ಲಿ ಅವರು ಮಾಡಿದ ಸಾಧನೆ, ನೀಡಿದ ಕೊಡುಗೆ ಮತ್ತು ಉಂಟುಮಾಡಿದ ಬದಲಾವಣೆಗಳು ತುಂಬಾ ಮೌಲ್ಯಯುತವಾಗಿವೆ. ಇದು ಕರ್ನಾಟಕದ ಚರಿತ್ರೆಯಲ್ಲಿ ಮಾತ್ರವಲ್ಲ, ಭಾರತದ ಹಾಗೂ ವಿಶ್ವದ ಇತಿಹಾಸದಲ್ಲಿ ದಾಖಲಿಸಬೇಕಾದ ಘಟನೆಯಾಗಿಯೇ ಕಂಗೊಳಿಸಿದೆ.

**ವಚನ ಸಾಹಿತ್ಯದ ಪ್ರಮುಖ ಮೌಲ್ಯಗಳು :**

ಸಮಾಜದ ಎಲ್ಲಾ ಜಾತಿಯವರೂ ವಚನವನ್ನು ಮುಖ್ಯ ಮಾಧ್ಯಮವನ್ನಾಗಿ ಮಾಡಿಕೊಂಡು, ತಮ್ಮ ಅನುಭವಗಳನ್ನು ಹೇಳಿಕೊಳ್ಳತೊಡಗಿದ್ದರಿಂದ ವಚನ ಸಾಹಿತ್ಯ ಒಂದು ಚಳವಳಿಯೂ ಆಯಿತು. ವಚನಕಾರರು ಸ್ವತಂತ್ರ ಮನೋಭಾವ ಹೊಂದಿದವರಾಗಿ ಸಾಹಿತ್ಯ ರಚಿಸಬೇಕೆಂಬ ಉದ್ದೇಶದಿಂದ ವಚನ ಬರೆದವರಲ್ಲ. ದಿನದಿನದ ತಮ್ಮ ಅನುಭವಗಳನ್ನು ವಚನಗಳ ರೂಪದಲ್ಲಿ ಹೇಳಿದರು. ಶರಣರು ತಾವು ಅಂದಿನ ಸಮಾಜದಲ್ಲಿ ಕಂಡ ಅನ್ಯಾಯ, ಅಧರ್ಮ ಅಸಮಾನತೆ, ಮೂಢನಂಬಿಕೆ ಮತ್ತು ಡಾಂಭಿಕತೆಯನ್ನು ವಚನಗಳ ಮೂಲಕ ಪ್ರತಿಭಟಿಸಿದರು. ಸಮಾಜ ಸುಧಾರಣೆ ಮತ್ತು ಶಿವಭಕ್ತಿ ಪ್ರಸಾರ ಅವರ ಮುಖ್ಯ ಉದ್ದೇಶವಾಗಿತ್ತು. ಈ ರೀತಿಯ ಸಾಹಿತ್ಯವು ಭಾರತದ ಬೇರಾವ ಭಾಷೆಗಳಲ್ಲೂ ಇಲ್ಲ. ಕನ್ನಡದಿಂದ ವಿಶ್ವಸಾಹಿತ್ಯಕ್ಕೆ ಏನಾದರೂ ಕಾಣಿಕೆ ನೀಡಬೇಕೆಂದರೆ ಆಗ ನಾವು ವಚನ ಸಾಹಿತ್ಯವನ್ನೇ ಆರಿಸಿಕೊಳ್ಳಬೇಕಾಗುತ್ತದೆ. ಭಾವಗೀತೆಯ ಗುಣ ಹೊಂದಿ ಗದ್ಯರೂಪದಲ್ಲಿರುವ ಶರಣರ ಬೋಧೆಯೇ ವಚನಗಳು. ಕುಲಕ್ಕಿಂತ ಶೀಲವೇ ಮುಖ್ಯ ಕಾಯಕವೇ ಎಲ್ಲರಿಗೂ ಅತ್ಯಗತ್ಯ ಕಾಯಕದಲ್ಲಿ ಮೇಲು ಕೀಳೆಂಬುದಿಲ್ಲ ಎಂಬುದನ್ನು ಬೋಧಿಸಿದರು. ಬಸವಾದಿ ಶಿವಶರಣರು ಕಾಯಕ ದಾಸೋಹ ತತ್ವಗಳನ್ನು ಪ್ರತಿಪಾದಿಸುತ್ತಾರೆ. ಅವುಗಳಂತೆ ನಡೆದು ತೋರಿಸುತ್ತಾರೆ, ಸೋಮಾರಿತನವನ್ನು ಮತ್ತು ಬಿಕ್ಷುಕ ವೃತ್ತಿಯನ್ನು ಖಂಡಿಸುತ್ತಾರೆ. ಶರಣರ ದೃಷ್ಟಿಯಲ್ಲಿ ಪರರ ದುಡಿಮೆಯ ಮೇಲೆ ಜೀವಿಸುವುದು ಕಳ್ಳತನವಾದ್ದರಿಂದ ಪ್ರತಿಯೊಬ್ಬರು ಒಂದಿಲ್ಲೊಂದು ಕಾಯಕವನ್ನು ಮೇಲು ಕೀಳೆಂದು ಭಾವಿಸದೆ ಸತ್ಯ ಶುದ್ಧವಾದ ರೀತಿಯಲ್ಲಿ ಬಾಳು ಸಾಗಿಸುತ್ತಿದ್ದರು. ಶರಣರಿಗೆ ಕಾಯಕವೇ ದೇವಾಲಯವಾಗಿತ್ತು ಕಾಯಕವೇ ದೇವರ ಪೂಜೆಯಾಗಿತ್ತು ಆದರೆ ಪೂಜೆ ಕಾಯಕವಾಗಿರಲಿಲ್ಲ ಇದು ಶಿವಶರಣರೆಲ್ಲರೂ ಒಪ್ಪಿಕೊಂಡ ಅಪ್ಪಿಕೊಂಡ ಸತ್ಯವಾಗಿತ್ತು. ಬಸವಣ್ಣನವರು ತಮ್ಮದೊಂದು ವಚನದಲ್ಲಿ ಹೀಗೆ ಹೇಳುತ್ತಾರೆ.

**ಹೊಲೆ ಹೊಲೆಯರ ಮನೆಯ ಹೊಕ್ಕು**
**ಸಲೆ ಕೈ ಕೂಲಿಯ ಮಾಡಿಯಾದರೂ**
**ನಿಮ್ಮ ನಿಲುವಿಂಗೆ ಕುದಿವೆನಲ್ಲದೆ**
**ಎನ್ನೊಡಲವಸರಕ್ಕೆ ಕುದಿದೆನಾದಡೆ**
**ತಲೆದಂಡ ಕೂಡಲ ಸಂಗಮದೇವಾ**

ಪ್ರತಿಯೊಬ್ಬನು ತನ್ನ ಕಾಯಕಕ್ಕೆ ನಿಷ್ಠರಾಗಬೇಕೆಂಬದು ಶರಣರ ಪ್ರಧಾನ ಆಶಯವಾಗಿತ್ತು. ಕಾಯಕದ ಮಹತ್ವ ತಿಳಿಸಲು ಸುಮ್ಮನೆ ಕುಳಿತಿದ್ದ ತನ್ನ ಪತಿಗೆ ಲಕ್ಕಮ್ಮನು ಹೀಗೆ ಹೇಳುತ್ತಾಳೆ.

**ಕಾಯಕ ನಿಂದಿತ್ತು ಹೋಗಯ್ಯ ಎನ್ನಾಳ್ದನೆ**
**ಭಾವಶುದ್ಧವಾಗಿ ಮಹಾಶರಣರ ತಿಪ್ಪೆಯ ತಪ್ಪಲಕ್ಕಿಯ ತಂದು**
**ನಿಶ್ಚೈಸಿ ಮಾಡಬೇಕು ಮಾರಯ್ಯ ಪ್ರಿಯ**
**ಅಮರೇಶ್ವರ ಲಿಂಗಕ್ಕೆ ಬೇಗ ಹೋಗು ಮಾರಯ್ಯ**

ಎಂದು ಮಾರಯ್ಯನನ್ನು ಎಚ್ಚರಿಸಿ, ಕಾಯಕಕ್ಕೆ ತೆರಳುವಂತೆ ಮಾಡುತ್ತಾಳೆ. ದುಡಿಮೆಗೆ ಗಂಟೆಗಿಷ್ಟು, ಹೊತ್ತಿಗಿಷ್ಟು ಸಂಭಾವನೆ ಪಡೆದು, ಏನೂ ದುಡಿಯದೆ ಸೋಮಾರಿಗಳಾಗಿ ಪ್ರತಿಫಲ ನಿರೀಕ್ಷಿಸುವ ಜನರಿಗೆ ಈ ನಡೆ ದಾರಿದೀಪ. ಹಗ್ಗ ಹೊಸೆಯುವವ, ಸೌದೆ ಹೊರುವವ, ಚಪ್ಪಲಿ ಹೊಲಿಯುವವ, ಹೆಂಡಮಾರುವವ, ಅಗಸ, ಬೆಸ್ತ, ಬೇಡ ಇವರೆಲ್ಲರೂ ವೇದ ಓದುವ ಬ್ರಾಹ್ಮಣನಷ್ಟೇ ಮುಖ್ಯರು ಇದು ವಚನಕಾರರ ಸಿದ್ಧಾಂತವಾಗಿತ್ತು. ಅವರ ಜೀವನದ ದೃಷ್ಟಿಯಂತೆಯೇ ಸಾಹಿತ್ಯದ ಸೃಷ್ಟಿಯೂ ಅಭಿವ್ಯಕ್ತವಾಗತೊಡಗಿತು. ಇನ್ನೊಂದು ವಿಶೇಷವೆಂದರೆ ಹನ್ನೆರಡನೇ ಶತಮಾನದಲ್ಲಿ ಕನ್ನಡ ಭಾಷೆ ಹಳೆಗನ್ನಡದಿಂದ ನಡುಗನ್ನಡಕ್ಕೆ ಬದಲಾಗಿರುವುದನ್ನು ಗಮನಿಸಬೇಕಾಗುತ್ತದೆ. ಆಗಿನ ಸಮಾಜದಲ್ಲಿ ಶರಣರು ಕಂಡ ನ್ಯೂನತೆಗಳೇನು? (ಈಗಲೂ ಆ ನ್ಯೂನತೆಗಳು ಸಂಪೂರ್ಣವಾಗಿ ಬದಲಾವಣೆಯೇನೂ ಆಗಿಲ್ಲ.) ಆ ನ್ಯೂನತೆಗಳನ್ನು ತೊಡೆದು ಹಾಕಲು ಶರಣರು ನಿರಂತರ ಪ್ರಯತ್ನಿಸಿರುವುದನ್ನು ಕಾಣಬಹುದು.

1. **ಅಸ್ಪೃಶ್ಯತೆ, ಮೌಢ್ಯ, ಅಜ್ಞಾನ ಮತ್ತು ಕಂದಾಚಾರಗಳು**
2. **ಬೇರೆ ಬೇರೆ ಜಾತಿಗಳವರು ಪರಸ್ಪರ ಭೋಜನ ಮಾಡಲು ನಿಷೇಧ.**
3. **ಅಂತೆಯೇ ಪರಸ್ಪರ ವಿವಾಹಸಂಬಂಧ ಮಾಡಿಕೊಳ್ಳಲು ನಿಷೇಧ.**

**4. ಹಲವು ಜಾತಿಗಳಿಗೆ ವೇದಾಧ್ಯಯನ ಸವಲತ್ತು ನಿರಾಕರಣೆ.**
**5. ಕೆಲವು ವೃತ್ತಿಗಳನ್ನು ಕೈಗೊಳ್ಳಲು ನಿರಾಕರಣೆ.**
**6. ವಿಪರೀತ ಮಡಿ–ಮೈಲಿಗೆ ಪರಿಕಲ್ಪನೆ.**
**7. ಸ್ತ್ರೀಯರು ಅನೇಕ ವಿಷಯಗಳಲ್ಲಿ ಪುರುಷರಿಗಿಂತ ಕೀಳೆಂಬ ಭಾವನೆ.**
**8. ವಾಮಪಂಥೀಯ ಆಚರಣೆಗಳು, ಕೆಳವರ್ಗದವರ ಪ್ರಾಣಿಬಲಿ ಮುಂತಾದ ಕ್ಷುದ್ರ ಆಚರಣೆಗಳು.**

ಇಂತಹ ಅಸಂಭದ್ದ ಆಚರಣೆಗಳ ವಿರುದ್ದ ಹೋರಾಡಿ ನವ ಸಮಾಜದ ನಿರ್ಮಾಣಕ್ಕೆ ನಾಂದಿ ಹಾಡಿದರು.

ಹನ್ನೆರಡನೆಯ ಶತಮಾನದ ಬಸವಣ್ಣ ಮತ್ತು ಇತರ ಶಿವಶರಣರು ಸರ್ವ ಸಮಾನತೆಯ ಸಮಾಜ ನಿರ್ಮಾಣಕ್ಕೆ ಬದ್ರ ಬುನಾದಿ ಹಾಕಿದರು. ವಚನ ಸಾಹಿತ್ಯದ ಮಹತ್ವ ಸಮಾಜದ ಎಲ್ಲಾ ಜಾತಿಯವರೂ ವಚನವನ್ನು ಮುಖ್ಯ ಮಾಧ್ಯಮವನ್ನಾಗಿ ಮಾಡಿಕೊಂಡು, ತಮ್ಮ ಅನುಭವಗಳನ್ನು ಹೇಳಿಕೊಳ್ಳತೊಡಗಿದ್ದರಿಂದ ಅಂದಿನ ಸಮಾಜದಲ್ಲಿ ಕಂಡ ಅನ್ಯಾಯ, ಅಧರ್ಮ, ಅಸಮಾನತೆ, ಮೂಢನಂಬಿಕೆ ಮತ್ತು ಡಾಂಭಿಕತೆಯನ್ನು ವಚನಗಳ ಮೂಲಕ ಪ್ರತಿಭಟಿಸಿದರು.

ವಚನ ಚಳುವಳಿ ಜೀವ ಪಡೆದು ಒಂಬತ್ತು ಶತಮಾನಗಳಿಗೂ ಹೆಚ್ಚು ಸಮಯ ಆಗಿದ್ದರೂ ಅವು ಪ್ರಸಕ್ತ ಸನ್ನಿವೇಶಕ್ಕೆ ಸಮಕಾಲೀನ ಸವಾಲುಗಳಿಗೆ ಸಿದ್ದೌಷಧದಂತೆ, ಅತ್ಯುತ್ತಮ ಚಿಕಿತ್ಸೆಯಂತೆ ಪ್ರಸ್ತುತವಾಗಿವೆ. ಸಾರ್ವಕಾಲಿಕ ಮೌಲ್ಯಗಳಾಗಿ ಸಮಕಾಲಿನ ಸಮಸ್ಯೆಗಳ ಪರಿಹಾರಕ್ಕೆ ಮಾರ್ಗೋಪಾಯಗಳಾಗಿವೆ. ಜಾತಿ ಭೇದ ಪದ್ದತಿಗಳು, ಭಾರತವನ್ನು ವಿನಾಶದತ್ತ ಉಪಕ್ರಮಿಸುತ್ತಿದ್ದ ಕ್ಲಿಷ್ಟ ಸನ್ನಿವೇಶದಲ್ಲಿ ಭಾರತೀಯ ಸಮಾಜಕ್ಕೆ ಹೊಸ ಸಮರ್ಥ, ದಿಗ್ದರ್ಶಕ, ಬಲಾಢ್ಯ, ಚಿಂತಕ, ದಾರ್ಶನಿಕ ಮಾರ್ಗದರ್ಶಕದ ಅನಿವಾರ್ಯತೆಯನ್ನು ಸೃಷ್ಟಿಸಿದ್ದ ಸಂಕಷ್ಟ ಸಮಯದಲ್ಲಿ ಉದಯಿಸಿದ ಬೆಳಕೇ ವಚನ ಸಾಹಿತ್ಯ ಮೌಲ್ಯಗಳಾದವು.

**ಮತ್ತೆ ಕೊಂಡು ಹೋಗಿ ಅಲ್ಲಿಯೇ ಸುರಿ**
**ಮಾರಯ್ಯ ಪ್ರಿಯ ಅಮರೇಶ್ವರನ ಲಿಂಗ ಕೊಟ್ಟು**
**ಕಾಯಕವೇ ಸಾಕು ಮಾರಯ್ಯ**

ಆಯ್ದಕ್ಕಿ ಲಕ್ಕಮ್ಮ ಹೀಗೆ ಹೇಳುವ ಮೂಲಕ ದುರಾಸೆಯನ್ನು ಬಿಡಲು ತಿಳಿಸಿ ಆತನು ತಂದಿದ್ದ ಅಧಿಕ ಅಕ್ಕಿಯನ್ನು ಅಲ್ಲೇ ಸುರಿದು ಬರಲು ತಿಳಿಸುತ್ತಾಳೆ. ಹೆಚ್ಚಿಗೆ ಏಕೆ ತಂದೆ ಎಂದು ಪ್ರಶ್ನಿಸುತ್ತಾಳೆ. ಇಂತಹ ದಿಟ್ಟತನ, ಸಾದ್ವಿ ನಡವಳಿಕೆ ಈಗ ಎಲ್ಲರಲ್ಲಿಯೂ ಬೆಳೆದಿದ್ದೇ ಆದರೆ ಆರ್ಥಿಕ ಸಮಾನತೆ, ಸಾಮಾಜಿಕ ಸಮಾನತೆ ಮೂಡಿರಲು ಸಾಧ್ಯವಾಗುತ್ತದೆ. ವಚನಗಳು ಕಳೆಕಿತ್ತು ಕೃಷಿ ಮಾಡಿ ಜೀವನೋಪಾಯಕ್ಕಾಗಿ ಬೆಳೆದ ಆಹಾರ ಧಾನ್ಯಗಳಂತೆ ಬದುಕಿಗೆ ಉತ್ತಮ ಮಾರ್ಗವನ್ನು ತೋರಿಲು ಪ್ರಾರಂಭಿಸಿದವು. ವಚನ ಸಾಹಿತ್ಯ ಸಂಪ್ರದಾಯಕ್ಕಿಂತ ಅನುಭವಕ್ಕೆ ಹೆಚ್ಚು ಪ್ರಾಮುಖ್ಯತೆಯನ್ನು ನೀಡಿ ಕರ್ನಾಟಕದಲ್ಲಿ ದೊಡ್ಡ ಕ್ರಾಂತಿಯನ್ನೆ ಮಾಡಿ ವಿಶ್ವಧರ್ಮದ ಸಾಲಿನಲ್ಲಿ ನಿಂತಿರುವುದನ್ನು ಕಾಣಬಹುದು.

**ದಾಸಿ ಪುತ್ರನಾಗಲಿ, ವೇಶ್ಯಾ ಪುತ್ರನಾಗಲಿ,**
**ಶಿವದೀಕ್ಷೆಯಾದ ಬಳಿಕ ಸಾಕ್ಷತ್ ಶಿವನೆಂದು ವಂದಿಸಿ,**
**ಪೂಜಿಸಿ ಪಾದೋದಕ ಪ್ರಸಾದವ ಕೊಂಬುದೇ ಯೋಗ್ಯ.**
**ಹೀಗಲ್ಲದೆ ಉದಾಸೀನವ ಮಾಡಿ ಬಿಡುವವರಿಗೆ**
**ಪಂಚಮಹಾಪಾತಕ ನರಕ ಕಾಣಾ ಕೂಡಲ ಚನ್ನ ಸಂಗಮದೇವ.**

ಎಂದು ಚನ್ನಬಸವೇಶ್ವರರು ಎಲ್ಲರಿಗೂ ಎಚ್ಚರಿಕೆ ನೀಡಿ ಸಮಾಜದಲ್ಲಿ ಎಲ್ಲರೂ ಸಮಾನರು ಎಂಬುದನ್ನು ಧೃಡಪಡಿಸಲು ಸಹಪಂಕ್ತಿ ಭೋಜನ, ವೃತ್ತಿ, ಜಾತಿ ಯಾವುದಾದರೂ ಅವುಗಳನ್ನು ಪರಿಗಣಿಸದೆ ಅವರುಗಳ ಮನೆಯಲ್ಲಿ ಊಟಮಾಡಬೇಕೆಂದು ಅವರ ಸಂಬಂಧಗಳನ್ನು ಬೆಳೆಸಬೇಕೆಂದು ಸೂಚಿಸುತ್ತಾರೆ. 12ನೇ ಶತಮಾನದಲ್ಲೂ ಇದ್ದ ಈ ತಾರತಮ್ಯ ಇಂದಿಗೂ ಜೀವಂತವಾಗಿದ್ದು ಸಾಮಾಜಿಕ ಪಿಡುಗಾಗಿ ಕಾಣುತ್ತಿದೆ. ಅದನ್ನು ಸರಿಪಡಿಸಲು ವಚನಕಾರರು ಶ್ರಮಿಸಿದಂತೆ, ಸಮಾನತೆಯ ಸಮಾಜ ನಿರ್ಮಾಣಕ್ಕಾಗಿ ಇಂದಿನ ಅವಶ್ಯಕತೆಯೂ ಆಗಿರುವುದು ವಚನ ಸಾಹಿತ್ಯದ ಅಗತ್ಯ ಪ್ರಾಮುಖ್ಯತೆಯನ್ನು ಶ್ರುತಪಡಿಸುತ್ತದೆ. ಸದಾಚಾರದಲ್ಲಿ ಕಾಯಕಕ್ಕೆ ಹೆಚ್ಚಿನ ಪ್ರಾಶಸ್ತ್ಯವುಂಟು, ಕಾಯಕವೆಂದರೆ ಜೀವನೋಪಾಯಕ್ಕೆ ಕೈಗೊಂಡ ವೃತ್ತಿ, ಎಲ್ಲ ವೃತ್ತಿಗಳೂ ಗೌರವಯುತವಾದುದೆಂದೂ, ಅವುಗಳಲ್ಲಿ ಯಾವುದೂ ಹೆಚ್ಚು ಕಡಿಮೆ ಇಲ್ಲವೆಂದು ವೃತ್ತಿಯಿಂದ ಜಾತಿಗಳು ಏರ್ಪಡುವುದಿಲ್ಲವೆಂದು ವಚನ ಧರ್ಮ ಸಾರಿ ಹೇಳುತ್ತದೆ.

**ಕಾಸಿ ಕಮ್ಮಾರವಾದ, ಬೀಸಿಮಡಿವಾಳನಾದ**
**ಹಾಸನಿಕ್ಕಿ ಸಾಲಿಗನಾದ, ವೇದವ ನೋದಿ ಹಾರುವನಾದ**
**ಇದು ಕಾರಣ ಕೂಡಸಂಗಮದೇವ ಲಿಂಗ**
**ಸಂಗವನರಿತವನೇ ಕುಲಜನು**

ಪ್ರತಿಯೊಬ್ಬ ಮನುಷ್ಯನಿಗೂ ತನ್ನದೇ ಆದ ಚಿಂತನೆ ಆಲೋಚನೆ ತಾರ್ಕಿಕತೆ, ಒಳ್ಳೆಯ ಕೆಟ್ಟದ್ದನ್ನು ವಿಮರ್ಶಿಸುವ, ನಿರ್ಧರಿಸುವ ಸ್ವಾತಂತ್ರ್ಯವಿರುತ್ತದೆ. ತನ್ನ ಜೀವನದ ಶಿಲ್ಪಿ ತಾನೇ ಎಂದು ವ್ಯಕ್ತಿಯಲ್ಲಿ ಅಂತರ್ಗತವಾಗಿರುವ ಪ್ರತಿಭಾ ಸಂಪನ್ನತೆಯನ್ನು ತಾನೇ ಎಂದೂ ಅರಿಯಲಾರರು.

**ಎಲ್ಲ ಎಲ್ಲವನರಿದು ಫಲವೇನಯ್ಯ**
**ತನ್ನಲ್ಲಿ ಅರಿವು ಸ್ವಯಂ ಆಗಿರಲು**
**ಅನ್ಯರ ಕೇಳಲುಂಟೇ ಚನ್ನಮಲ್ಲಿಕಾರ್ಜುನ**
**ಎನ್ನುವ ಅಕ್ಕನ ಮಾತುಗಳು ಮೊದಲು ತನ್ನನ್ನು**

ಅರಿತುಕೊಳ್ಳುವ ಅಗತ್ಯವನ್ನು ಅಂದೇ ಪ್ರತಿಪಾದಿಸಿದ್ದಾರೆ. ಅಜ್ಞಾನಿಗಳ, ವಿಚಾರ ಶೂನ್ಯರ ಸಹವಾಸ ಮಾಡದೆ ಸಜ್ಜನರ ಜ್ಞಾನಿಗಳ ಸಹವಾಸ ಮಾಡುವುದು ಅಮೃತದ ಸವಿಗೆ ಹೋಲಿಸಿ

**ಅರಿಯದವರೊಡನೆ ಸಂಗವ ಮಾಡಿದರೆ**
**ಕಲ್ಲ ಹೊಯ್ದು ಕಿಡಿಯ ತೆಗೆದು ಕೊಂಬಂತೆ**
**ಚನ್ನಮಲ್ಲಿಕಾರ್ಜುನಯ್ಯ ನಿಮ್ಮ ಶರಣರ**
**ಸಂಗವ ಮಾಡಿದೊಡೆ ಕರ್ಪೂರಗಿರಿಯನು ಉರಿಕೊಂಬಂತೆ**

ಎನ್ನುತ್ತಾ ಶರಣರ ಸಾಂಗತ್ಯ ನಮ್ಮನ್ನು ಸನ್ಮಾರ್ಗದೆಡೆಗೆ ಔನ್ನತ್ಯದೆಡೆಗೆ ಕೊಂಡೊಯ್ಯುವ ದಿಶೆಯಲ್ಲಿ ತಿಳಿಸಿಕೊಟ್ಟಿದ್ದಾರೆ. ಅನಾಚಾರ, ದುರಾಚಾರ, ಭ್ರಷ್ಟಚಾರ, ಅತ್ಯಾಚಾರಗಳೇ ಹೆಚ್ಚಾಗಿ ಸಾಮಾಜಿಕ ಜೀವನ ಮಾರ್ಗದೆಡೆಗೆ ಸಾಗುತ್ತಿರುವ ಸಮಾಜ ವಿನಾಶದತ್ತ ಸಾಗುತ್ತಿದೆ. ವಿನಾಶವಾಗದೆ ಉಳಿಯಬೇಕಾದರೆ ವಚನಕಾರರ ನಡೆ, ನುಡಿ ಆದರ್ಶಗಳನ್ನು ಮೈಗೂಡಿಸಿಕೊಂಡು **'ಸರ್ವೇಜನೋ ಸುಖಿನೋ ಭವಂತು'** ಎಂಬ ನುಡಿಗೆ ಅನ್ವರ್ಥವಾಗಿ ಬದುಕು ಕಟ್ಟಿಕೊಂಡು ಭಾರತೀಯ ಜೀವನಮೌಲ್ಯಗಳನ್ನು ಉಳಿಸಲು ನುಡಿದಂತೆ ನಡೆದು ತೋರಿಸಿದರು.

ಸಮಾಜದ ಎಲ್ಲಾ ಜಾತಿಯವರೂ ವಚನಗಳನ್ನು ಮುಖ್ಯ ಮಾಧ್ಯಮವನ್ನಾಗಿ ಮಾಡಿಕೊಂಡು ತಮ್ಮ ಅನುಭವಗಳನ್ನು ಹೇಳಿಕೊಳ್ಳತೊಡಗಿದ್ದರಿಂದ ವಚನ ಸಾಹಿತ್ಯದ ಮೌಲ್ಯಗಳನ್ನು ಸರ್ವರೂ ಒಪ್ಪಿಕೊಂಡರು. ಬಂಡಾಯ ಸಾಹಿತ್ಯಕ್ಕಿಂತ ಮೊದಲು ಕನ್ನಡ ನಾಡಿನಲ್ಲಿ ವಚನವು ಒಂದು ಮುಖ್ಯ ಚಳುವಳಿಯಾಗಿತ್ತು ಮುಖವಾಣಿಯಾಗಿತ್ತೆಂದರೆ ಅದರ ಸಾಮಾಜಿಕ ವ್ಯಾಪಕತೆ ಅಪಾರವಾದುದೆಂಬುದು ಅರಿವಿಗೆ ಬಾರದೆ ಇರದು. ವಚನಗಳು ಅತ್ಯಂತ ಸರಳ ಹಾಗೂ ನೇರವಾಗಿ ದೇಸಿಯ ಸೊಗಡಿನಿಂದ ಸೊಬಗಿನಿಂದ ಕೂಡಿವೆ. ಹಲವಾರು ಕವಿಗಳು, ಮಠಾಧೀಶರು ಲಿಂಗಾಯತ ಸಿದ್ಧಾಂತವನ್ನು ಅಳವಡಿಸಿ ಸಾಹಿತ್ಯ ರಚಿಸಿದರು ಇಡೀ ಲಿಂಗಾಯತ ಸಾಹಿತ್ಯದಲ್ಲಿ ಮುಖ್ಯ ಮತ್ತು ಅಪರೂಪದ ಅಭಿವ್ಯಕ್ತಿಯೆಂದರೆ ಅದು ವಚನ ಸಾಹಿತ್ಯ. ಅದು ಸ್ಥಾವರ ಸಮಾಜವನ್ನು ತಿರಸ್ಕರಿಸಿ ಜಂಗಮ ಸಮಾಜವನ್ನು ನಂಬಿದ ಬಹಳ ದೊಡ್ಡ ಮಾನವೀಯ ಮೌಲ್ಯ. ಕಾಯಕ ಮತ್ತು ದಾಸೋಹಗಳ ಮೂಲಕ ಸಮಾಜೋತ್ಪನ್ನಗಳ ಸಮಪಾಲು ಸಿದ್ಧಾಂತವನ್ನು ಮಂಡಿಸುವ ಈ ಚಳವಳಿ ಭಾರತೀಯ ಸಂಸ್ಕೃತಿಯಲ್ಲೇ ಅತಿ ಪ್ರಮುಖವಾದುದು. ಪ್ರಮುಖ ವಚನಕಾರರು ವಚನ ಸಾಹಿತ್ಯದ ಶ್ರೀಮಂತಿಕೆಗೆ ನೂರಾರು ಜನ ಶರಣರು ಶ್ರಮಿಸಿದ್ದಾರೆ. ತಮ್ಮ ವಚನಗಳಲ್ಲಿ ತಮ್ಮದೇ ಆದ ಅಂಕಿತನಾಮಗಳನ್ನು ಬಳಸಿದ್ದಾರೆ. ದೇವರ ದಾಸಿಮಯ್ಯ 'ರಾಮನಾಥ' ಎಂದು ಬಳಸಿದರೆ, ಅಕ್ಕಮಹಾದೇವಿಯು 'ಚೆನ್ನಮಲ್ಲಿಕಾರ್ಜುನ' ಹಾಗೂ ಬಸವಣ್ಣನವರು 'ಕೂಡಲ ಸಂಗಮದೇವ' ಎಂದು ಬಳಸಿದ್ದಾರೆ. ಇನ್ನೂ ಅನೇಕ ಶಿವಶರಣರು ವಚನ ಸಾಹಿತ್ಯದಲ್ಲಿ ತಮ್ಮನ್ನು ಕಾಯಕದಿಂದ ಗುರುತಿಸಿಕೊಂಡು ತಮ್ಮ ಅಂಕಿತದೊಂದಿಗೆ ಸಾಹಿತ್ಯ ರಚನೆ ಮಾಡಿ ವಚನ ಸಾಹಿತ್ಯದ ಸಾರ್ವಕಾಲಿಕ ಮೌಲ್ಯಗಳನ್ನು ಬಿತ್ತುವಲ್ಲಿ ಫಲ ಕಂಡಿದ್ದಾರೆ.

**ಲೋಕದ ಡೊಂಕ ನೀವೇಕೆ ತಿದ್ದಿವಿರಿ?**
**ನಿಮ್ಮ ನಿಮ್ಮ ತನುವ ಸಂತೈಸಿಕೊಳ್ಳಿ**

**ನಿಮ್ಮ ನಿಮ್ಮ ಮನವ ಸಂತೈಸಿಕೊಳ್ಳಿ**
**ನೆರೆಮನೆಯ ದುಃಖಕ್ಕೆ ಅಳುವವರ**
**ಮೆಚ್ಚ ಕೂಡಲಸಂಗಮದೇವ"!**

ನೆಂದು ಸಮಾಜ ಸುಧಾರಿಸುವ ಮೊದಲು ತಮ್ಮನ್ನು ತಾವು ಸುಧಾರಿಸಿಕೊಳ್ಳಬೇಕೆಂದು ಶಿವಶರಣರ ನಿಲುವನ್ನು ಅಭಿವ್ಯಕ್ತಿಸುತ್ತಾರೆ.

ವಚನಗಳನ್ನು ಸರಿ ಸುಮಾರು 270ಕ್ಕೂ ಹೆಚ್ಚು ವಚನಕಾರರು ವಚನ ರಚನೆಯಲ್ಲಿ ತೊಡಗುತ್ತಾರೆ. ಇದರಲ್ಲಿ ಸ್ತ್ರೀ ವಚನಗಾರ್ತಿಯರು 33ಕ್ಕೂ ಹೆಚ್ಚು ಶಿವಶರಣೆಯರು ವಚನಗಳನ್ನು ರಚಿಸಿದ್ದಾರೆ. ಇದರಲ್ಲಿ ಅಜ್ಞಾನತ ವಚನಕಾರ್ತಿಯ ಕೊಡುಗೆಯನ್ನು ನಾವುಗಳು ಮರೆಯುವಂತಿಲ್ಲ. ಈ ವಚನಕಾರರಲ್ಲಿ ಜಾತಿ,ಮೇಲು–ಕೀಳು, ಧರ್ಮ ತಾರತಮ್ಯ, ಕಾಯಕ ತಾರತಮ್ಯ, ಲಿಂಗ ತಾರತಮ್ಯಗಳಿಲ್ಲದ ರೀತಿಯಲ್ಲಿ ಬದುಕನ್ನು ಕಟ್ಟಿಕೊಂಡರು. ಅಂದಿನ ಕಾಲಘಟದಲ್ಲಿದ್ದ ರಾಜಪ್ರಭುತ್ವ ಕಿರುಕುಳ, ಸಾಮಾನ್ಯ ಜನರನ್ನು ಮೂರನೆಯ ದರ್ಜೆಯವರಂತೆ ಕಾಣುವ ಪಂಡಿತಶಾಹಿವರ್ಗದವರು, ಸಾಮಾಜದಲ್ಲಿ ತುಂಬಿತುಳುಕುತ್ತಿದ್ದ ಮೂಢನಂಬಿಕೆಗಳು, ಆಚಾರ–ವಿಚಾರಗಳಲ್ಲಿ ಅಂಧಾನುಕರಣೆ ಇನ್ನೂ ಮುಂತಾದ ಸಾಮಾಜಿಕ ಪಿಡುಗುಗಳ ನಿವಾರಣೆಗಾಗಿ ಹುಟ್ಟಿಕೊಂಡ ಪ್ರಗತಿಪರವಾಗಿ ಆಲೋಚಿಸುವ ಮನುಷ್ಯನ ಜೀವನಕ್ರಮವನ್ನು ಮಾನವೀಯ ನೆಲೆಯಲ್ಲಿ ಸುಧಾರಿಸುವುದು. ಶೋಷಿತ ಸಮುದಾಯಗಳನ್ನು ಒಟ್ಟುಗೂಡಿಸಿ ಅವುಗಳನ್ನು ಸಮಾಜದ ಮುಖ್ಯವಾಹಿನಿಗೆ ತರುವುದು ಅವರ ಕನಸಾಗಿತ್ತು. ಹೀಗೆ ಹೊಸ ಸಮಾಜವನ್ನು ಕಟ್ಟುವಾಗ ಆ ನವ ಸಮಾಜಕ್ಕೆ ಬೇಕಾದ ಪರಿಕರಗಳನ್ನು ತಮ್ಮ ಬದುಕಿನಾಳದ ಅನುಭವದ ನೆಲೆಯಿಂದಲೇ ಕಂಡುಕೊಂಡರು. ಮನುಷ್ಯ ಸುಖ–ಶಾಂತಿಗಾಗಿ ಮಾನವೀಯ ಮೌಲ್ಯಗಳನ್ನು ಜನಸಾಮಾನ್ಯರಲ್ಲಿ ಭಿತ್ತ ತೊಡಗಿದರು. ಅದರ ಪರಿಣಾಮವಾಗಿ ಹನ್ನೆರಡನೆಯ ಶತಮಾನದಲ್ಲಿ ಮಾನವೀಯ ಮೌಲ್ಯಗಳ ಕ್ರಾಂತಿಯಾಯಿತು. ಶರಣರು ನೀಡಿದ ಮಾನವೀಯ ಮೌಲ್ಯಗಳು ಸಮಾಜದಲ್ಲಿ ಸಮಾನತೆ ಐಕ್ಯತೆ ಭಾವಕ್ಯತೆಗೆ ನಾಂದಿ ಹಾಡಿರುವುದನ್ನು ಅಲ್ಲಗಳೆಯುವಂತಿಲ್ಲ.

1. **ದಯೆ**
2. **ಕರುಣೆ**
3. **ಅಹಿಂಸೆ**
4. **ಧರ್ಮ ಮತ್ತು ನೈತಿಕತೆ**
5. **ಸತ್ಯ ವೈಯಕ್ತಿಕ ಮಾನವೀಯ ಮೌಲ್ಯ**
6. **ಭಕ್ತಿ ಹಿತ–ಮಿತ–ಮೃದು ಭಾಷೆ**
7. **ಸಕಾರಾತ್ಮಕ ಮೌಲ್ಯ**
8. **ಸರಳ ಜೀವನ**
9. **ಸಾಂಸರಿಕ ಮೌಲ್ಯ**
10. **ಸ್ತ್ರೀಪರವಾದ ಮೌಲ್ಯಗಳು**

**ದಯೆ:** ಮನುಷ್ಯರಾಗುವುದು ನಮ್ಮ ನಡೆ–ನುಡಿಯನ್ನು ಹೇಗೆ ಬಳಸುವತ್ತೇವೆಂಬುದರ ಮೇಲೆ ನಿಂತಿರುತ್ತದೆ. ಸಕಲ ಜೀವರಾಶಿಗಳಲ್ಲಿ ದಯೆಯನ್ನು ತೋರುವುದು ಮಾನವೀಯ ಧರ್ಮವಾಗಿದೆ. ಈ ಹೇಳಿಕೆಗೆ ಸಾಕ್ಷಿ ಎಂಬಂತೆ ಬಸವಣ್ಣನವರ ವಚನವನ್ನು ಈ ಕೆಳಕಂಡಂತೆ ಉದಾಹರಿಸಬಹುದು

**ದಯವಿಲ್ಲದ ಧರ್ಮವಾವುದೇವುದಯ್ಯಾ?**
**ದಯವೇ ಬೇಕು ಸಕಲ ಪ್ರಾಣಿಗಳೆಲ್ಲರಲ್ಲಿಯೂ**
**ದಯವೇ ಧರ್ಮ ಮೂಲವಯ್ಯ**
**ಕೂಡಲ ಸಂಗಯ್ಯನಂತಲ್ಲದೊಲ್ಲನಯ್ಯಾ!**

ಶರಣರ ದೃಷ್ಟಿಯಲ್ಲಿ ಪ್ರಾಪಂಚಿಕ ಜೀವನದಲ್ಲಿ ಬರುವ ಸಕಲ ಪ್ರಾಣಿಗಳಲ್ಲೂ ಸಹ ಮನುಷ್ಯನಾದವನು ದಯೆಯನ್ನು ತೋರಿ ತಮ್ಮೊಂದಿಗೆ ಸಹಜೀವನ ನಡೆಸಿದಾಗ ಮಾತ್ರ ಮಾನವೀಯ ಬದುಕು ಸಹ್ಯವಾಗುತ್ತದೆನ್ನುತ್ತಾರೆ.

**ಕರುಣೆ:** ಅಂದಿನ ಕಾಲದಲ್ಲಿ ವಚನಕಾರು ಸಮಾಜದಲ್ಲಿ ನಡೆಸುತ್ತಿದ್ದ ಅಹಿತಕರ ಘಟನೆಗಳನ್ನು ಸರಿಪಡಿಸಲು ಹೊಸ ಮೌಲ್ಯವನ್ನು ಕಂಡುಕೊಂಡು ಬದುಕಿನ ಪಾಠವನ್ನು ಬಿತ್ತಿದ್ದರು. ಈ ವಚನವು ಇದಕ್ಕೆ ಸಾಕ್ಷಿಯಾಗುತ್ತದೆ.

**ಎಲ್ಲವೂ ಎಲವೋ ಪಾಪಕರ್ಮದ ಮಾಡಿದವನೇ**
**ಎಲವೋ ಎಲೋ ಬ್ರಹ್ಮಹತ್ಯವ ಮಾಡಿದವನೇ**
**ಒಮ್ಮೆ 'ಶರಣೆ'ನ್ನೆಲವೋ!**
**ಒಮ್ಮೆ 'ಶರಣೆ' ಎಂದರೆ ಪಾಪಕರ್ಮ ಓಡುವುದು**
**ಸರ್ವ ಪ್ರಾಯಶ್ಚಿತ್ತಕ್ಕೆ ಹೊನ್ನ ಪರ್ವತಂಗಳೈದವು**
**ಒರ್ವಗೆ ಶರಣೆನ್ನು ನಮ್ಮ ಕೂಡಲಸಂಗಮದೇವಂಗೆ!**

ಎನ್ನುವ ವಚನವು ತಾವುಗಳು ತಪ್ಪುದಾರಿಯಲ್ಲಿ ನಡೆಯುತ್ತಿದ್ದರೆ. ತಿದ್ದಿಕೊಂಡು ಸರಿದಾರಿಯಲ್ಲಿ ನಡೆದರೆ ಬದುಕು ಹಸನಾಗುತ್ತದೆ. ಇಂತಹ ಸನ್ನಿವೇಶದಲ್ಲಿ ಕರುಣೆಯ ಮಾನವೀಯ ಮೌಲ್ಯವನ್ನು ಕಾಣಬಹುದು.

**ಅಹಿಂಸೆ:** ಶರಣರು ಪ್ರತಿಪಾದಿಸಿದ ಬಹುಮುಖ್ಯವಾದ ಮಾನವೀಯ ಮೌಲ್ಯವೇ ಅಹಿಂಸೆ. ಹಿಂಸೆಯಿಂದ ಎನ್ನನ್ನು ಗೆಲ್ಲಲಾಗದು. ಆದ್ದರಿಂದ ತಮ್ಮ ಜೀವನದಲ್ಲಿ ಈ ಕೆಳಕಂಡ ಸಪ್ತ ಸೂತ್ರಗಳನ್ನು ಅಳವಡಿಸಿಕೊಂಡರೆ ಬದುಕು ಸುಲಭವಾಗುತ್ತದೆನ್ನುತ್ತಾರೆನ್ನುವುದು ಈ ವಚನವು ತಿಳಿಸುತ್ತದೆ.

**ಕಳಬೇಡ ಕೊಲಬೇಡ ಹುಸಿಯ ನುಡಿಯಬೇಡ**
**ತನ್ನ ಬಣ್ಣಿಸಬೇಡ, ಇದಿರ ಹಳಿಯಲು ಬೇಡ**
**ಇದೇ ಅಂತರಂಗ ಶುದ್ಧಿ, ಇದೇ ಬಹಿರಂಗ ಶುದ್ಧಿ**
**ಇದೇ ನಮ್ಮ ಕೂಡಲಸಂಗಮದೇವರನೊಲಿಸುವ ಪರಿ**

ಎನ್ನುವಲ್ಲಿ ಕೊಲೆ, ಸುಲಿಗೆ, ಸುಳ್ಳು, ಬೇರೆಯವರನ್ನು ಹಳೆಯವುದನ್ನು ತಿರಸ್ಕರಿಸಿ ತಮ್ಮ ಅಂತರಂಗ ಮತ್ತು ಬಹಿರಂಗ ಮಾನವೀಯ ಮೌಲ್ಯವನ್ನು ಎತ್ತಿಹಿಡಿಯುತ್ತಾರೆ.

**ಧರ್ಮ ಮತ್ತು ನೈತಿಕತೆ :** ಧರ್ಮವು ಅಂಧಕಾರದಲ್ಲಿ ಮುಳುಗಿರುವವರಿಗೆ ಬೆಳಕನ್ನು ಕೊಡುವುದಾಗಿರಬೇಕೆ ಹೊರತು ಕತ್ತಲನ್ನಲ್ಲ ಎಂಬ ಭಾವನೆಯಿಂದ ಜಡ್ಡುಗಟ್ಟಿದ ಧರ್ಮಕ್ಕೆ ಸಮಾಜಮುಖಿಯಾದ ಹೊಸ ರೂಪವನ್ನು ಕೊಟ್ಟರು. ಧಾರ್ಮಿಕ ನೈತಿಕತೆಯನ್ನು ಪ್ರತಿಪಾದಿಸಲು ವಚನಗಳ ಮೂಲಕ ಮಾನವೀಯ ಮೌಲ್ಯಗಳನ್ನು ಬಿತ್ತಲು ಪ್ರಯತ್ನಿಸಿದರು.

**ಸತ್ಯ ಮತ್ತು ವೈಯಕ್ತಿಕ ಮೌಲ್ಯಗಳು :** ನುಡಿದಂತೆ ನಡೆ–ನುಡಿದಂತೆ ನುಡಿ' ಎಂಬ ಸಿದ್ಧಾಂತದ ಅಡಿಯಲ್ಲಿ ಬದುಕಿತೋರಿದರು. ಸಿದ್ಧರಾಮನ ವಚನವು ಇದಕ್ಕೆ ಸಾಕ್ಷಿಯಾಗಿ ನಿಲ್ಲುತ್ತದೆ.

**ನುಡಿದಂತೆ ನಡೆವ, ನಡೆದಂತೆ ನುಡಿವ,**
**ಸದ್ಭಕ್ತಿ ಸದಾಚಾರಯುಕ್ತ ಮಹಾತ್ಮರ ಪಾದವ ಹಿಡಿದು ಬದುಕಿಸಯ್ಯಾ**

ಎನ್ನವ ವಚನವು ನಮ್ಮ ಬದುಕಿನಲ್ಲಿ ಅಳವಡಿಸಿಕೊಳ್ಳುವ ಸತ್ಯವನ್ನು ಪ್ರತಿಪಾದಿಸುತ್ತದೆ.ವೈಯಕ್ತಿಕ ಮೌಲ್ಯವು ವ್ಯಕ್ತಿಗಳಲ್ಲಿ ಸಕಾರಾತ್ಮವಾಗಿ ಸುಧಾರಿಸಿಕೊಳ್ಳಬೇಕೆಂದು ವಚನಕಾರರು ಈ ವಚನದಲ್ಲಿ ತಿಳಿಸುತ್ತಾರೆ.

**ಭಕ್ತಿ ಮತ್ತು ಹಿತ–ಮಿತ ಮೃದು ಭಾಷೆ :** ಅಂದಿನ ಕಾಲದಲಿದ್ದ ದೇವರು–ಧರ್ಮಶಾಸ್ತ್ರ, ಪುರಾಣ, ವೇದ, ಉಪನಿಷತ್ತುಗಳ ಬಗ್ಗೆಗಿನ ಡಾಂಬಿಕ ನಿಲುವುಗಳನ್ನು ತಿರಸ್ಕರಿಸಿ ತಾವು ನಂಬಿದ ವಿಚಾರಗಳನ್ನು ತಿಳಿಸ ಹೊರಟರು. ಆ ಸಂದರ್ಭದಲ್ಲಿ ಅಲ್ಲಮಪ್ರಭುಗಳು "ಭಕ್ತಿ ಎಂಬುದು ತೋರುಂಬಲಾಭ" ಎಂದು ಹೇಳುತ್ತಾ ಹುಸಿಭಕ್ತಿ ಆಗದೆ ನೈಜತೆಯ ಬದುಕಿನ ಕಡೆಗೆ ಗಮನ ಹರಿಸಬೇಕೆನ್ನುತ್ತಾರೆ.

**ಸಕಾರಾತ್ಮಕ ಮೌಲ್ಯ :** ಜೀವನದಲ್ಲಿ ಎನನ್ನಾದರೂ ಸಾಧಿಸಬೇಕೆಂದರೆ ನಕಾರಾತ್ಮಕ ವಿಚಾರಗಳನ್ನು ಬದಿಗಿರಿಸಿ ಸಕಾರಾತ್ಮಕ ಮೌಲ್ಯಗಳನ್ನು ಅಳವಡಿಸಿಕೊಂಡು ಜೀವನಸಾಗಿಸಬೇಕೆಂದು ವಚನಕಾರರು ಬಯಸುತ್ತಾರೆ. ಅದರಂತೆ ಬದುಕನ್ನು ಸಾಗಿಸುತ್ತಾರೆ. ಇದಕ್ಕೆ ಉದಾಹರಣೆಯಾಗಿ ಬಸವಣ್ಣನವರ ವಚನ ತಿಳುಸುತ್ತದೆ.

**ಹೊಯಿದವರೆನ್ನ ಹೊರೆದವರೆಂಬೆ, ಬಯಿದವರೆನ್ನ ಬಂಧುಗಳೆಂಬೆ,**
**ನಿಂದಿಸಿದವರೆನ್ನ ತಂದೆತಾಯಿಗಳೆಂಬೆ, ಅಳಿಗೊಂಡವರೆನ್ನ ಆಳ್ದರೆಂಬೆ,**

**ಜರೆದವರೆನ್ನ ಜನ್ಮಬಂಧುಗಳೆಂಬೆ,**
**ಹೊಗಳೆದವರೆನ್ನ ಹೊನ್ನ ಕೂಲದಲಿಕ್ಕಿದರೆಂಬೆ, ಕೂಡಲಸಂಗಮದೇವಾ."**

ಎನ್ನುತ್ತಾ ಈ ಸಮಾಜದಲ್ಲಿ ಸಕಾರಾತ್ಮಕ ಮೌಲ್ಯಗಳನ್ನು ಅಳವಡಿಸಿಕೊಂಡು ಹೇಗೆ ಬದುಕಬೇಕೆಂಬುದನ್ನು ತಿಳಿಸುತ್ತಾರೆ.

**ಸರಳ ಜೀವನ :** ವಚನಕಾರರು ಸರಳ ಜೀವನವನ್ನು ಪ್ರತಿಪಾದಿಸಿ ಅದರಂತೆ ಬದುಕಿ ತೋರಿಸಿದರು. ನಮಗಿರುವ ಸಂಪತ್ತು ತಮ್ಮ ಕುಟುಂಬಕ್ಕೆ ಎಷ್ಟು ಬೇಕೋ ಅಷ್ಟನ್ನು ಉಪಯೋಗಿಸಿ ಉಳಿದ ಸಂಪನ್ಮೂಲವನ್ನು ಸಮಾಜಕ್ಕೆ ಕೊಟ್ಟು ನಿಸ್ವಾರ್ಥವಾದ ಜೀವನ ನಡೆಸಿದ್ದರು. ಇದಕ್ಕೆ ಆಯ್ದಕ್ಕಿ ಲಕ್ಕಮ್ಮನವರ ವಚನಗಳಲ್ಲಿ ಕಂಡು ಬರುವ "ಈಸಕ್ಕಿಯಾಸೆ ನಮಗೇಕಯ್ಯಾ" ಎನ್ನುವಲ್ಲಿ ನಮಗರಿವಾಗುತ್ತದೆ. 'ಕರಿಯನಿತ್ತಡೆ ಒಲ್ಲೆ, ಸಿರಿಯನಿತ್ತಡೆ ಒಲ್ಲೆ ಹಿರಿದಪ್ಪ ರಾಜ್ಯವನಿತ್ತಡೆ ಒಲ್ಲೆ ನಿಮ್ಮ ಶರಣರ ಸೂಳ್ನುಡಿಯನೊಂದರೆಗಳಿಯುತ್ತದೆ ನಿಮ್ಮನಿತ್ತೆ ಕಾಣಾ ರಾಮನಾಥ"! ಎನ್ನುತ್ತಾ ಸರಳ ಜೀವನ ಮಾಡಲು ಶರಣರ ಹಿತನುಡಿಗಳು ಸಾಕೆಂದು ಹೇಳಿ ಮಾನವೀಯ ಮೌಲ್ಯಗಳನ್ನು ಸುಖಕರ ಬದುಕಿಗೆ ಬಿತ್ತುತ್ತಾರೆ. ಅಂತರಂಗ–ಬಹಿರಂಗ ಮನಸ್ಸುಗಳು ಶುದ್ಧವಾಗಿದ್ದಾಗ ಮಾತ್ರ ನಮ್ಮ ಬದುಕು ಹಸನಾಗುತ್ತದೆಂಬುದನ್ನು ಹೇಳುತ್ತಾರೆ. ಸಾಂಸಾರಿಕ ಜೀವನವನ್ನು ಶಿವಶರಣರು ನಿರಾಕರಿಸುವುದಿಲ್ಲ. ಕೌಟುಂಬಿಕ ಜೀವನದಲ್ಲಿದ್ದುಕೊಂಡು ದೇವರಲ್ಲಿ ಭಕ್ತಿ ಸಮಾಜ ಸುಧಾರಣೆ ಕಾಯಕದಲ್ಲಿ ವೃತ್ತಿಪರತೆ ಮುಂತಾದವುಗಳನ್ನು ಸಾಧಿಸುತ್ತಾ ಹೋದರು. ಸತಿಪತಿಗಳೊಂದಾದ ಭಕ್ತಿ ಶಿವನಿಗೆ ಹಿತವಾಗಿರುವುದನ್ನು ಸ್ಮರಿಸಿ ನೈಜವಾದ ದಾಂಪತ್ಯ ಜೀವನ ನಡೆಸುತ್ತಾರೆ.

**ಸಂಸ್ಕಾರ ಮೌಲ್ಯ :** ವಚನಗಳು ನಮ್ಮ ಬದುಕಿನ ಅನುಭವಗಳ ನೇರ ಅಭಿವ್ಯಕ್ತಿ ಕ್ರಮವಾದ್ದರಿಂದ ಬದುಕಿಗೆ ಹತ್ತಿರವಾದ ಜೀವನ ಮೌಲ್ಯವನ್ನು ಹೇಳುತ್ತವೆ. ಸಂಸ್ಕಾರ ಮೌಲ್ಯ ಎಂದರೆ ಹಿರಿಯರಿಗೆ, ಕಿರಿಯರಿಗೆ, ಗುರುಗಳಿಗೆ ತಮಗಿಂತ ಎಲ್ಲರದಲ್ಲಿ ಸಾಧಿಸಿರುವ ಸಾಧಕರಿಗೆ ಮಾನವೀಯ ಮೌಲ್ಯಗಳನ್ನು ಹೇಗೆ ಕೊಡುತ್ತಾರೆಂಬುದನ್ನು ತಿಳಿಸುತ್ತದೆ. ಅತಿಥಿ ಸತ್ಕಾರವನು ಹೇಗೆ ಮಾಡಬೇಕೆಂಬುದನ್ನು ಈ ವಚನ ಹೇಳುತ್ತದೆ.

**ಏನ ಬಂದಿರಿ, ಹದುಳವಿದ್ದೀರೆ" ಎಂದರೆ**
**ನಿಮ್ಮ ಮೈಸಿರಿ ಹಾರಿ ಹೋಹುದೆ?**
**ಕುಳ್ಳಿರೆಂ" ದರೆ ನೆಲಕುಳಿ ಹೋಹುದೆ?**
**ಒಡನೆ ನುಡಿದಿರೆ, ಸಿರ ಹೊಟ್ಟೆ ಯೊಡೆವುದೆ?**
**ಕೊಡಲಿಲ್ಲದಿದ್ದರೊಂದ ಗುಣವಿಲ್ಲದಿರ್ದಡೆ?**
**ಕೆಡಹಿ ಮೂಗ ಕೊಯ್ಯದೆ ಮಣ್ಬನೆ ಕೂಡಲಸಂಗಮದೇವನು"**

ಮನೆಗೆ ಬರುವ ಅತಿಥಿಗಳನ್ನು ನಾವುಗಳು ಹೇಗೆ ನಡೆಸಿಕೊಳ್ಳಬೇಕೆಂಬುದನ್ನು ಈ ಮೇಲಿನ ವಚನ ಸ್ಪಷ್ಟವಾಗಿ ಚಿತ್ರಿಸುತ್ತದೆ.

**ಸ್ತ್ರೀಪರವಾದ ಮಾನವೀಯ ಮೌಲ್ಯ :** ಸನಾತನ ಕಾಲದಲ್ಲಿದ್ದ ಮಹಿಳೆಯರ ಶೋಷಣೆಯನ್ನು ಖಂಡಿಸಿದ ವಚನ ಸಾಹಿತ್ಯವು ಮಹಿಳೆಯರ ಬಗೆಗಿನ ಹೊಸ ಹೊಸ ವಿಚಾರಗಳನ್ನು ಪ್ರತಿಪಾದಿಸಿ ಸ್ತ್ರೀಯರಿಗೆ ತನ್ನದೇ ಆದ ಸಮಾಜದಲ್ಲಿ ಸ್ಥಾನ–ಮಾನಗಳನ್ನು ಪಡೆದುಕೊಂಡರು. ಇದಕ್ಕೆ ಪೂರಕವಾಗಿ ಹೆಣ್ಣು ಹೆಣ್ಣಲ್ಲ, ಹೆಣ್ಣು ರಾಕ್ಷಸಿಯಲ್ಲ, ಹೆಣ್ಣು ಪ್ರತ್ಯಕ್ಷ ಕಪಿಲಸಿದ್ಧಮಲ್ಲಿಕಾರ್ಜುನ ನೋಡಾ! ಎಂದು ಸಿದ್ಧರಾಮನ ತನ್ನ ವಚನದಲ್ಲಿ ಮಹಿಳೆಯರಿಗೆ ಕೊಡಬೇಕಾದ ಗೌರವವನ್ನು ಈ ರೀತಿ ಸೂಚಿಸಿದ್ದಾನೆ. ಹನ್ನೆರಡನೆಯ ಶತಮಾನದಲ್ಲಿ ಮೇಲ್ವರ್ಗ ಮತ್ತು ಕೆಳವರ್ಗಗಳೆನ್ನದೆ ಸರ್ವ ಸಮಾನವಾಗಿ ವಚನಗಳನ್ನು ರಚಿಸಿ ಮಾನವೀಯ ಮೌಲ್ಯಗಳನ್ನು ಪ್ರತಿಪಾದಿಸಿದರು. ಒಟ್ಟಾರೆ ಮಧ್ಯಕಾಲೀನ ಕನ್ನಡ ಸಾಹಿತ್ಯದ ಬೆಳೆಯಲ್ಲಿ ವಚನ ಸಾಹಿತ್ಯ ವಿಶಿಷ್ಟ ರೂಪವಾಗಿದೆ. ವಚನ ಕಾಲ ಘಟ್ಟವನ್ನು 'ವೈಚಾರಿಕತೆ' ವಚನ ಚಳುವಳಿ, ಧರ್ಮ ಸುಧಾರಣಾ ಚಳುವಳಿ, ಕಾಯಕ ಜೀವಿ ಚಳುವಳಿ ಎಂದು ನಾನಾ ಹೆಸರುಗಳಿಂದ ಕರೆದರೂ ಇಲ್ಲಿ ಮಾನವೀಯ ಮೌಲ್ಯಗಳ ಪ್ರತಿಪಾದನಾ ಚಳುವಳಿ ಎಂದೇ ಭಾವಿಸಬೇಕಾಗಿದೆ.. ಆದ್ದರಿಂದ ವಚನಕಾರರು ಬದುಕಿದ್ದು ಸಾರ್ವಕಾಲಿಕ ಮಾನವೀಯ ಮೌಲ್ಯಗಳ ನೆಲೆಯಲ್ಲಿಯೇ ಹೊರತು ಬೇರೆ ವಿಷಯಗಳಿಂದಲ್ಲ ಎಂಬುದು ಸ್ಪಷ್ಟವಾಗುತ್ತದೆ.

———————————————********———————————————

**ಆಕರ ಗ್ರಂಥಗಳು**


| | |
|---|---|
| 1.**ವಚನ ಧರ್ಮಸಾರ** | ಡಾ.ಎಂ. ಚಿದಾನಂದಮೂರ್ತಿ |
| 2.**ಭಕ್ತಿ ಭಂಡಾರಿ ಬಸವಣ್ಣ** | ಎಂ. ಆರ್. ಶ್ರೀನಿವಾಸಮೂರ್ತಿ |
| 3.**ಕಲ್ಯಾಣಕ್ರಾಂತಿ ಮತ್ತು ಸಾಂಸ್ಕತಿಕ ಸನ್ನಿವೇಶ** | ಡಾ. ವೆಂಕಟೇಶ್ ಎಲ್.ಎಂ. |
| 4.**ಕನ್ನಡ ಸಾಹಿತ್ಯ ಸಮೀಕ್ಷೆ** | ಡಾ.ಜಿ. ಎಸ್. ಶಿವರುದ್ರಪ್ಪ |
| 5.**ಅಕ್ಕನ ವಚನಗಳು** | ಸಂ. ಡಾ.ಆರ್.ಸಿ. ಹಿರೇಮಠ |
| 6.**ಶರಣರ ಸಮಾಜ** | ಸಂ. ಹೆಚ್.ವಿ.ನಾಗೇಶ |
| 7.**ಇಕ್ಕಟ್ಟು–ಬಿಕ್ಕಟ್ಟು** | ಪ್ರೊ. ಕೆ.ಜಿ. ನಾಗರಾಜಯ್ಯ |
| 8.**ವಚನ ಸಾಹಿತ್ಯ ಸಂಗ್ರಹ** | ಸಂ. ಶಿ. ಭೂಸನೂರ ಮಠ |
| 9.**ಜನಪ್ರಿಯ ಕನ್ನಡ ಸಾಹಿತ್ಯ ಚರಿತ್ರೆ** | ತ. ಸು. ಶಾಮರಾಯ |
| 10.**ಆದಯ್ಯನ ವಚನಗಳು** | ಸಂ. ಫ. ಗು. ಹಳಕಟ್ಟೆ |
| 11.**ಅಲ್ಲಮನ ವಚನಗಳು** | ಸಂ. ಎಲ್. ಬಸವರಾಜು. |